# ಡಿಜಿಟಲ್ ‘ವೋಟರ್ ಐಡಿ’




■ **ಶಶಿಕುಮಾರ್ ಸಿ.**

ಆಧಾರ್ ಕಾರ್ಡ್, ಪಾನ್ ಕಾರ್ಡ್, ಡಿಎಲ್, ಆರ್‌ಸಿ – ಹೀಗೆ ಬಹುತೇಕ ಎಲ್ಲ ರೀತಿಯ ಸೇವೆಗಳಿಗೆ ಡಿಜಿಟಲೀಕರಣ ಸೌಲಭ್ಯ ಸಿಕ್ಕಿದರೂ ವೋಟರ್ ಐಡಿಗೆ ಮಾತ್ರ ಆ ಭಾಗ್ಯ ಸಿಕ್ಕಿರಲಿಲ್ಲ. ಕೊನೆಗೂ ವೋಟರ್ ಐಡಿಗೂ ಡಿಜಿಟಲ್ ಸ್ಪರ್ಶ ನೀಡಲು ‘ಭಾರತೀಯ ಚುನಾವಣಾ ಆಯೋಗ’ ಮುಂದಡಿ ಇಟ್ಟಿದೆ.

ಈಚೆಗೆ ನಡೆದ ‘ಮತದಾರರ ದಿನಾಚರಣೆ’ಯ ಅಂಗವಾಗಿ ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರು ಮತದಾರರ ಗುರುತಿನ ಚೀಟಿಯ ಡಿಜಿಟಲ್ ಆವೃತ್ತಿಯನ್ನು ಅನಾವರಣಗೊಳಿಸಿದ್ದು, ಹೊಸ ಹಾಗೂ ಈಗಾಗಲೇ ನೋಂದಾಯಿತ ಮತದಾರರು, ತಮ್ಮ ಮತದಾರರ ಫೋಟೊ ಗುರುತಿನ ಚೀಟಿಯ ಡಿಜಿಟಲ್ ಆವೃತ್ತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

‘ಇ–ಎಪಿಕ್’ (eEPIC – Elector Photo Identity Card) ಡಿಜಿಟಲ್ ಆವೃತ್ತಿಯು ಎರಡು ಹಂತಗಳಲ್ಲಿ ದೇಶದ ಎಲ್ಲ ಮತದಾರರಿಗೆ ದೊರಕಲಿದೆ. ಮೊದಲ ಹಂತದಲ್ಲಿ ಹೊಸದಾಗಿ ನೋಂದಾಯಿತ, ಅಂದರೆ ಈ ಹಿಂದೆ ಯಾವುದೇ ನಿರ್ದಿಷ್ಟ ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಳ್ಳದ ಮತದಾರರಿಗೆ ಜನವರಿ 25ರಿಂದಲೇ ‘ಇ–ಎಪಿಕ್’ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಎರಡನೇ ಹಂತದಲ್ಲಿ ಫೆಬ್ರವರಿ 1ರ ನಂತರ ಈ ಹಿಂದೆ ಮತ ಚಲಾವಣೆ ಮಾಡಿದವರಿಗೂ ಡಿಜಿಟಲ್ ಆವೃತ್ತಿ ಸಿಗಲಿದೆ.

ಇದುವರೆಗೆ ಮತದಾರರ ಗುರುತಿನ ಚೀಟಿ ಪಡೆಯದೆ ಇರುವ ಹಾಗೂ ಹೊಸದಾಗಿ ನೋಂದಾಯಿತ ಮತದಾರರು, ಫಾರ್ಮ್ 6ರಲ್ಲಿ ಉಲ್ಲೇಖಿಸಿರುವಂತೆ ನೊಂದಾಯಿತ ಮೊಬೈಲ್ ಸಂಖ್ಯೆಯನ್ನು ಹೊಂದಿರಲೇಬೇಕು. ಜೊತೆಗೆ ನೋಂದಾಯಿತ ಮತದಾರರು ಡಿಜಿಟಲ್ ವೋಟರ್ ಐಡಿ ಕಾರ್ಡ್ ಪಡೆಯಲೂ ಅದೇ ಮೊಬೈಲ್ ಸಂಖ್ಯೆ ಹಾಗೂ ಮತದಾರರ ಗುರುತಿನ ಚೀಟಿಯ ಸಂಖ್ಯೆಯನ್ನು ನಮೂದಿಸಬೇಕು.

ಡಿಜಿಟಲ್ ಆವೃತ್ತಿಯ ಗುರುತಿನ ಚೀಟಿಯನ್ನು ಎಡಿಟ್ ಮಾಡಲಾಗದು. ಇದನ್ನು ಮೊಬೈಲ್ ಫೋನ್ ಅಥವಾ ವೈಯಕ್ತಿಕ ಕಂಪ್ಯೂಟರ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಲ್ಲದೇ ಇದನ್ನು ‘ಡಿಜಿ ಲಾಕ್ ಆ್ಯಪ್’ನಲ್ಲೂ ಡೌನ್‌ಲೋಡ್ ಮಾಡಿಕೊಂಡು ಸೇವ್ ಮಾಡಿಕೊಳ್ಳಬಹುದು ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಸಾಮಾನ್ಯ ಮತದಾರರ ಗುರುತಿನ ಚೀಟಿಯನ್ನು ವಿತರಿಸಲು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಹೀಗಾಗಿ, ಮತದಾರರಿಗೆ ತಮ್ಮ ಗುರುತಿನ ಚೀಟಿಯನ್ನು ವೇಗವಾಗಿ ತಲುಪಿಸಲು ಹಾಗೂ ಸುಲಭವಾಗಿ ದಾಖಲೆಗಳನ್ನು ಒದಗಿಸಲು ಡಿಜಿಟಲ್ ಆವೃತ್ತಿಯು ಹೆಚ್ಚು ಅನುಕೂಲಕರ.

1993ರಲ್ಲಿ ಪರಿಚಯಿಸಿದ ಮತದಾರರ ಫೋಟೊ ಗುರುತಿನ ಚೀಟಿಯನ್ನು ವ್ಯಕ್ತಿಯ ಗುರುತು ಹಾಗೂ ವಿಳಾಸದ ಪುರಾವೆಯಾಗಿಯೂ ಪರಿಗಣಿಸಲಾಗುತ್ತದೆ. ಚುನಾವಣಾ ಆಯೋಗದ ವಾರ್ಷಿಕೋತ್ಸವ ಹಾಗೂ ಮತದಾರರ ದಿನಾಚರಣೆಯ ಅಂಗವಾಗಿ ಈ ಡಿಜಿಟಲ್ ಆವೃತ್ತಿಯನ್ನು ಅನಾವರಣ ಮಾಡಲಾಗಿದೆ.

### ಡೌನ್‌ಲೋಡ್ ಹೇಗೆ?

ಡಿಜಿಟಲ್ ಆವೃತ್ತಿಯ ಡೌನ್‌ಲೋಡ್ ಮಾಡಲು ಮತದಾರರಿಗೆ voterportal.eci.gov.in ಅಥವಾ www.nvsp.in ವೆಬ್‌ಸೈಟ್‌ಗಳ ಸೇವೆಯನ್ನು ಒದಗಿಸಲಾಗಿದೆ. ಈ ಎರಡೂ ವೆಬ್‌ಸೈಟ್‌ಗಳಲ್ಲಿ ಅಗತ್ಯ ಮಾಹಿತಿಯನ್ನು ಪೂರೈಸಿ ಲಾಗಿನ್ ಆಗಬೇಕು.

### ಆ್ಯಪ್ ಸೌಲಭ್ಯವೂ ಇದೆ!

‘ಇ–ಎಪಿಕ್’ ಡಿಜಿಟಲ್ ಆವೃತ್ತಿಯನ್ನು ಪಡೆಯಲು ಭಾರತೀಯ ಚುನಾವಣಾ ಆಯೋಗವು ‘ವೋಟರ್ ಹೆಲ್ಪ್‌ಲೈನ್’ (Voter Helpline) ಎಂಬ ಆ್ಯಪ್ ಸಿದ್ಧಪಡಿಸಿದೆ. ಗೂಗಲ್ ಹಾಗೂ ಆ್ಯಪಲ್ ಪ್ಲೇ ಸ್ಟೋರ್‌ಗಳಲ್ಲಿ ಲಭ್ಯವಿರುವ ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಡಿಜಿಟಲ್ ವೋಟರ್ ಐಡಿ ಕಾರ್ಡ್ ಪಡೆಯಬಹುದು. ■

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ ಬೆಂಗಳೂರು







ಪಂಡಿತ ಎಂ.ಬಿ. ಜೋಶಿ
96888 88526

ನಿಮ್ಮ ಹಸ್ತರೇಖೆ, ಜನ್ಮಕುಂಡಲಿ, ಮುಖಲಕ್ಷಣ, ಕವಡೆ ಶಾಸ್ತ್ರ, ಪಂಚಪಕ್ಷಿ, ಪ್ರಶ್ನೆಶಾಸ್ತ್ರ, ಅಷ್ಟಮಂಗಳ ಪ್ರಶ್ನೆಗಳಿಂದ ಸಂಪೂರ್ಣ ಭವಿಷ್ಯ ಹೇಳಲಾಗುವುದು.

ಪತಿ-ಪತ್ನಿ ವಿರಸ, ವಿವಾಹದಲ್ಲಿ ಅಡೆ-ತಡೆ, ವಿಚ್ಛೇದನ, ಅತ್ತೆ-ಸೊಸೆ, ನಾದಿನಿಯರ ಕಿರಿಕಿರಿ, ಕೌಟುಂಬಿಕ, ಅನಾರೋಗ್ಯ, ಮನೆಯಲ್ಲಿ ಅಶಾಂತಿ, ಶತ್ರುಗಳ ಕಾಟ, ಸ್ತ್ರೀ-ಪುರುಷ ಪ್ರೇಮ ವಿಚಾರ, ವ್ಯವಹಾರದಲ್ಲಿ ಅಪಾರ ನಷ್ಟ, ಸಾಲದ ಬಾಧೆ, ದುಃಶ್ಚಟ, ದುಃಸ್ವಪ್ನ, ಅಪಘಾತ, ಅವಘಡಗಳು, ಜನ-ಧನ ವಶೀಕರಣ, ಲೈಂಗಿಕ, ಮಾನಸಿಕ ಚಿಂತೆ, ಭೂಮಿ, ಆಸ್ತಿ ತಂಟೆ, ರಾಜಕೀಯ, ಕೋರ್ಟ್‌ಕೇಸ್, ದುಷ್ಟ ಶಕ್ತಿ ಇನ್ನಿತರ ಘೋರ ಮತ್ತು ನಿಗೂಢ ಗುಪ್ತವಾದ ಸಮಸ್ಯೆಗಳಿಗೆ ಅತೀ ಶೀಘ್ರದಲ್ಲಿ ಶಾಸ್ತ್ರೋಕ್ತವಾದ ಶಾಶ್ವತ ಪರಿಹಾರ ಮಾಡಿಕೊಡಲಾಗುವುದು.



ಜನ್ಮ ಕುಂಡಲಿ, ಜಾತಕ, ನಾಮಾವಳಿ, ಸರ್ಪದೋಷ, ಕುಜದೋಷ, ನವಗ್ರಹ ಕಾಟ, ಗ್ರಹಣದ ದೋಷ, ಗೃಹ ವಾಸ್ತು ದೋಷ, ಕಂಟಕ, ಸಂತಾನ ದೋಷ, ಸಂಖ್ಯಾ ಶಾಸ್ತ್ರ, ಜನನ, ಮರಣ, ಋತುಮತಿ ದೋಷ ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ.

ವಿಶೇಷ ಸೂಚನೆ: ಹೋಟೆಲ್, ರಿಯಲ್ ಎಸ್ಟೇಟ್, ಜ್ಯುವೆಲರ್ಸ್, ಫೈನಾನ್ಸ್, ಇಂಡಸ್ಟ್ರಿಯಲ್ ಇನ್ನಿತರ ದೊಡ್ಡ ವ್ಯಾಪಾರ, ವ್ಯವಹಾರಗಳ ಪ್ರಗತಿಗಾಗಿ ಶಾಸ್ತ್ರೋಕ್ತ ಪರಿಹಾರವಿದೆ.

ಸಮಯ : ಬೆಳಗ್ಗೆ 10 ರಿಂದ ಸಂಜೆ 8 ರ ವರೆಗೆ
ಫೋನ ಮಾಡಿ ಭೇಟಿಯ ಸಮಯವನ್ನು ಖಚಿತಪಡಿಸಿಕೊಳ್ಳಿ.

ವಿಳಾಸ: ಮನೆ ನಂ. 125, ಮೈಕೋ ಲೇಔಟ್, 5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಬಿ.ಟಿ.ಎಮ್. ಲೇಔಟ್, 2ನೇ ಹಂತ, ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಹಿಂದುಗಡೆ, ಬೆಂಗಳೂರು-560 076

96888 88526
For More Visit
@ mbjoshiastro.in